ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಜಯತೇ ಜಯತೇ ಸತ್ಯಮೇವ ಜಯತೇ

ಕೆಲವು ವರ್ಷಗಳ ಹಿಂದೆ ಪುಣೆಯಲ್ಲಿ ಮೂತ್ರಪಿಂಡಗಳ ತಜ್ಞರ ಅಂತರಾಷ್ಟ್ರೀಯ ಸೆಮಿನಾರ್ ಒಂದನ್ನು ಆಯೋಜಿಸಲಾಗಿತ್ತು. ಆಯೋಜಕರಲ್ಲಿ ಕೆಲವರು ಸಚಿನ್ ಭಾಯಿ ವೈದ್ಯ ಅವರಿಗೆ ಪರಿಚಿತರಿದ್ದರು. ದೇಶ ವಿದೇಶಗಳಿಂದ ಸಾವಿರಾರು ಸಂಖ್ಯೆಯಲ್ಲಿ ವೈದ್ಯರು ಬರುವ ನಿರೀಕ್ಷೆ ಇತ್ತು. ಸಚಿನ್ ಭಾಯಿ ಅವರ ಪ್ರಯತ್ನದಿಂದ ಅಲ್ಲಿ ಭಾವೇಶ್ ಅವರಿಗೆ ಸ್ಟಾಲ್ ಹಾಕುವ ಅವಕಾಶ ಸಿಕ್ಕಿತು. ಆದರೆ ಆಯೋಜಕರು ಇವರಿಗೆ ಮತ್ತೂ ಒಂದಿಷ್ಟು ಕೆಲಸ ಹೇಳಲು ಬಯಸಿದ್ದರು. ಮೂತ್ರಪಿಂಡದ ಆಕಾರದ ಕ್ಯಾಂಡಲ್ಸ್ ಅನ್ನು ಬರುವ ಎಲ್ಲಾ ವೈದ್ಯರಿಗೆ ಉಡುಗೊರೆಯಾಗಿ ಕೊಡಲು ಬಯಸಿದ್ದರು. ಮೂತ್ರಪಿಂಡದ ಆಕಾರದ ಕೆಂಪು ಬಣ್ಣದ ಸುಮಾರು 12,000 ಮೋಂಬತ್ತಿಗಳನ್ನು ತಯಾರಿಸಬೇಕಿತ್ತು. ಮೂತ್ರಪಿಂಡದ ಆಕಾರ, ಗೋಡಂಬಿ ಅಥವಾ ಕಿಡ್ನಿ ಬೀನ್ಸ್ ಎಂದೇ ಕರೆಯುವ ಹುರುಳಿಕಾಳಿನ ಆಕಾರದಲ್ಲಿದೆ ಎಂದು ಭಾವೇಶ್ ಅವರಿಗೆ ಕೇಳಿ ಗೊತ್ತಿತ್ತು. ಅದನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು, ಭಾವೇಶ್ ಐದಾರು ಸ್ಯಾಂಪಲ್ ತಯಾರಿಸಿ ಆಯೋಜಕರಿಗೆ ತೋರಿಸಿದಾಗ, ಅವರಿಗೆ ಇಷ್ಟವಾಯಿತು. ಸಮಯ ಬಹಳ ಕಡಿಮೆ ಇತ್ತು. ಆದರೆ ಅದರಲ್ಲಿಯೇ ಉದ್ಯಮದ ಸಾಹಸ ಇರುವುದು. ಅವಕಾಶಗಳು ಬಾಗಿಲಿಗೆ ಬಂದಾಗ, ಸಮಯ ಕಡಿಮೆ, ಸಂಖ್ಯೆ ಜಾಸ್ತಿ ಎಂದು ಆಲಸ್ಯದಿಂದ ಗೊಣಗುವವರ ಬಾಗಿಲಿನಿಂದ ಭಾಗ್ಯಲಕ್ಷ್ಮಿ ಹೊರನಡೆಯುತ್ತಾಳೆ ಎಂದು ಗೊತ್ತಿತ್ತು. ಇಂತಹ ಸವಾಲಿನಂತಹ ಪ್ರತಿಯೊಂದು ಅವಕಾಶವನ್ನು ತಮ್ಮ ಹಗಲು ಇರುಳಿನ ಪರಿಶ್ರಮದಲ್ಲಿ ಎದುರಿಸುತ್ತಿದ್ದರು. ಭಾವೇಶ್ ಅವರ ಉತ್ಸಾಹ ಇಡೀ ತಂಡಕ್ಕೆ ಪ್ರೇರಣೆ ಒದಗಿಸುತ್ತಿತ್ತು. ಶ್ರಮಕ್ಕೆ ಹೆದರದ ತಂಡವನ್ನು ಭಾವೇಶ್ ಕಟ್ಟಿ ನಿಲ್ಲಿಸಿದ್ದರು. ಮೂತ್ರಪಿಂಡ ಆಕಾರದ 12,000 ಮೋಂಬತ್ತಿಗಳನ್ನು ಆಯೋಜಕರು ಹೇಳಿದ ಸಮಯಕ್ಕೆ ಸರಿಯಾಗಿ ತಯಾರಿಸಿ ತಲುಪಿಸಿದರು. ಆ ಸೆಮಿನಾರ್‌ಗೆ ಬಂದ ಪ್ರತಿಯೊಬ್ಬ ವೈದ್ಯರೂ ಮೊದಲ ಬಾರಿಗೆ ಮೂತ್ರಪಿಂಡದ ಆಕಾರದ ಮೋಂಬತ್ತಿಗಳನ್ನು ನೋಡುತ್ತಿದ್ದರು. ಹಾಗೆಂದೇ ಈ ಅಂಧ ತಂಡವನ್ನು ಭೇಟಿಯಾಗಲು ಅವರು ಹುಡುಕಿ ಬರತೊಡಗಿದರು. ಹಾಗೆ ಬಂದವರು ಆಕರ್ಷಕ ಮೋಂಬತ್ತಿಗಳನ್ನು ನೋಡಿ, ಬಲು ದೊಡ್ಡ ಮೊತ್ತದಲ್ಲಿ ಖರೀದಿಸಿದರು.

ಈ ಅನುಭವದಿಂದ ಪ್ರೇರಿತರಾಗಿ ಮುಂದೆ, ಅನೇಕ ಕಂಪನಿಗಳಿಗೆ ಅವರ ಪ್ರಾಡಕ್ಟ್‌ನ ಆಕಾರದ ಮೋಂಬತ್ತಿಗಳನ್ನು ಮಾಡಿಕೊಟ್ಟರು. ಅದರಲ್ಲಿ ಔಷಧಿ ಕಂಪನಿಯೊಂದಕ್ಕೆ ಮಾಡಿಕೊಟ್ಟ ಟಾನಿಕ್ ಬಾಟಲಿಯ ಆಕಾರದ ಮೋಂಬತ್ತಿಯೂ ಇದ್ದಿತು. ಉದ್ಯಮ ಹಿಗ್ಗಲು ಹೊಸ ಹೊಸ ಪ್ರಯೋಗಗಳು ಬೇಕು. ಮೋಂಬತ್ತಿಯ ಬೇರೆ ಬೇರೆ ಆಕಾರಗಳನ್ನು ತಯಾರಿಸಿದಂತೆ, ಅನೇಕ ಪ್ರದರ್ಶನಗಳ ಆಯೋಜಕರು ಇವರನ್ನು ವಿಶೇಷವಾಗಿ ಆಮಂತ್ರಿಸತೊಡಗಿದರು.

ಬೇರೊಂದು ಊರಿಗೆ ಮೋಂಬತ್ತಿಗಳನ್ನು ಹೊತ್ತುಕೊಂಡು ಹೋಗಿ ಸ್ಟಾಲ್ ಹಾಕುವುದು ಸುಲಭದ ಕೆಲಸವಲ್ಲ. ಪ್ರತಿ ಬಾರಿಯೂ ಸ್ಟಾಲ್ ಹಾಕಲು, ಕೊನೆಯಲ್ಲಿ ಅದನ್ನು ತೆಗೆಯಲು ಬಹಳಷ್ಟು ಸ್ವಯಂಸೇವಕರ ಅಗತ್ಯ ಬೀಳುತ್ತಿತ್ತು. ಮುಂಬಯಿಯಲ್ಲಿ ಸ್ಟಾಲ್ ಹಾಕುವುದರಲ್ಲಿ ಲಾಭವಿತ್ತು. ನೀತಾ ದಕ್ಷಿಣ ಮುಂಬಯಿಯ ಚರನೀ ರಸ್ತೆಯ ಹಿಂದುಜಾ ಕಾಲೇಜಿನಲ್ಲಿ ಓದಿ ಪದವಿ ಪಡೆದಿದ್ದರು. ನೀತಾ ಅವರ ಕಾಲೇಜಿನ ಎಲ್ಲ ಸ್ನೇಹಿತರೂ ಸಾಕಷ್ಟು ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದು, ದಕ್ಷಿಣ ಮುಂಬಯಿಯಲ್ಲಿಯೇ ನೆಲೆಸಿದ್ದರು. ದೊಡ್ಡ ಪ್ರದರ್ಶನದ ಸ್ಥಳಗಳು ದಕ್ಷಿಣ ಮುಂಬಯಿಯಲ್ಲಿ ಬಹಳಷ್ಟಿವೆ. ಹಾಗಾಗಿ ಅಲ್ಲಿಯ ಪ್ರದರ್ಶನಗಳಲ್ಲಿ ಭಾಗವಹಿಸಿದಾಗ, ವಿಷಯ ತಿಳಿದ ನೀತಾರ ಸ್ನೇಹಿತೆಯರು ಬೆಳಗ್ಗೆಯೇ ಹಾಲ್‌ಗೆ ತಿಂಡಿ–ಚಹಾ ಹಿಡಿದು ಬಂದುಬಿಡುತ್ತಿದ್ದರು. ಗಾಡಿಯಿಂದ ಬಾಕ್ಸ್‌ಗಳನ್ನು ತೆಗೆದಿರಿಸುವ ಕೆಲಸದಿಂದ ಹಿಡಿದು, ಬ್ಯಾನರ್ ಕಟ್ಟುವುದು,